ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ
ಈ ಸಂಜೆ

# 169 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಂಚಿಕೆ



ಬೆಂಗಳೂರು, ಫೆ.19- ಜೈನ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಕಾಮರ್ಸ್ ಸ್ಟಡೀಸ್‌ನಲ್ಲಿ ವಾರ್ಷಿಕ ವಿದ್ಯಾರ್ಥಿವೇತನ ಹಂಚಿಕೆ ಸಮಾರಂಭವನ್ನು ಆಯೋಜಿಸಿತ್ತು.

ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಉತ್ತೇಜಿಸಿ, 169 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ವಿತರಿಸಿತು. ಜೈನ್ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಎನ್. ಸುಂದರರಾಜನ್ ಉದ್ಘಾಟನಾ ಸಮಾರಂಭದಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ದೀಪ ಬೆಳಗುವಂತೆ ಆಹ್ವಾನಿಸಿದರು.

ಈ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಒಟ್ಟು ಐಎನ್‌ಆರ್ 50 ಲಕ್ಷ ಮೊತ್ತದ ವಿದ್ಯಾರ್ಥಿವೇತನ ವಿತರಣೆ ಮಾಡಲಾಯಿತು. ಜೈನ್ ವಿಶ್ವವಿದ್ಯಾನಿಲಯ ಮಾನ್ಯತೆ ಹೊಂದಿರುವ ವಿಶ್ವವಿದ್ಯಾನಿಲಯವಾಗಿ ಗುರುತಿಸಿಕೊಂಡಾಗಿನಿಂದ ಇದುವರೆಗೆ ಐಎನ್‌ಆರ್ 4.5 ಕೋಟಿಗಳಷ್ಟು ವಿದ್ಯಾರ್ಥಿವೇತನಗಳನ್ನು ವಿತರಿಸಿದೆ.

ಈ ಪ್ರಕಾರ ಸಮಾರಂಭಕ್ಕೆ ಚಾಲನೆ ನೀಡಿದ ಡಾ. ಎನ್ ಸುಂದರರಾಜನ್ ಅವರು, ಜೈನ್ ವಿಶ್ವವಿದ್ಯಾನಿಲಯದ ವಾರ್ಷಿಕ ವಿದ್ಯಾರ್ಥಿವೇತನ ಕಾರ್ಯಕ್ರಮದ ಹಿಂದಿರುವ ಉದ್ದೇಶವನ್ನು ವಿವರಿಸಿದರು.

ಇಲ್ಲಿ ವಿದ್ಯಾರ್ಥಿವೇತನದ ಮೊತ್ತ ಮುಖ್ಯವಲ್ಲ, ಈ ವರ್ಷ ನೀವು ಪಟ್ಟ ಪರಿಶ್ರಮಕ್ಕೆ ದೊರೆತಿರುವ ಗುರುತಾಗಿದೆ. ನಾನು ವಿದ್ಯಾರ್ಥಿಯಾಗಿದ್ದಾಗ, ನನ್ನ ಶಿಕ್ಷಣಕ್ಕೆ ನನ್ನ ಪೋಷಕರಿಂದ ಒಂದೇ ಒಂದು ನಯಾ ಪೈಸೆಯನ್ನೂ ಸಹ ತೆಗೆದುಕೊಂಡಿರಲಿಲ್ಲ, ಏಕೆಂದರೆ ನನಗೆ ಸದಾ ವಿದ್ಯಾರ್ಥಿವೇತನ ದೊರೆಯುತಿತ್ತು. ಆದ್ದರಿಂದ, ಓರ್ವ ವಿದ್ಯಾರ್ಥಿಯ ಜೀವನದಲ್ಲಿ ವಿದ್ಯಾರ್ಥಿವೇತನದ ಮೌಲ್ಯವೇನು ಹಾಗೂ ಇದರಿಂದ ವಿದ್ಯಾರ್ಥಿಗೆ ದೊರೆಯುವ ಪ್ರೋ ಎಂತದ್ದು ಎಂದು ನನಗೆ ತಿಳಿದಿದೆ ಎಂದರು.

ಮುರಳಿ ಕೃಷ್ಣ ಎಂಬ ವಿದ್ಯಾರ್ಥಿಯ ಪೋಷಕ ಜೈನ್ ವಿಶ್ವವಿದ್ಯಾನಿಲಯದ ಉದ್ದೇಶವನ್ನು ಪ್ರಶಂಸಿಸಿದರು.

ಮೊದಲ ವರ್ಷದ ಬಿ.ಕಾಂ ಓದುತ್ತಿರುವ ವಿದ್ಯಾರ್ಥಿನಿ ಡಿಂಪಲ್ ಕುಮಾರಿ ಮಾತನಾಡಿದರು.



ಜೈನ ವಿಶ್ವವಿದ್ಯಾನಿಲಯದ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನ ನೀಡಲಾಯಿತು. ಉಪ ಕುಲಪತಿ ಡಾ.ಎನ್. ಸುಂದರರಾಜನ್ ಸೇರಿದಂತೆ ವಿವಿಧ ವಿಭಾಗದ ಮುಖ್ಯಸ್ಥರು ಹಾಜರಿದ್ದರು.